ತಮಾಷೆ ಮಾಡುತ್ತಿದ್ದಾಳೆಂದು ಎನಿಸಿದ್ದ ಟೊಂಯಾನಿಗೆ ಅದು ಖಂಡಿತವಾಗಿಯೂ ತಮಾಷೆಯಲ್ಲವೆಂದು ಗೊತ್ತಾಗಲು ತಡವಾಗಲಿಲ್ಲ. ಅವನು ಗೋಗರೆದ, ಅತ್ತ, ಪರಿಪರಿಯಾಗಿ ವಿನಂತಿಸಿದ. ಅವಳು ಕರಗಲಿಲ್ಲ. ಟೊಂಯಾನಿಗೆ ಹಸಿವೆಯಿಂದ ಕಣ್ಣು ಕತ್ತಲಾಗತೊಡಗಿತು... ಅವನ ಅಜಾನುಬಾಹುಗಳ ಕೆಳಗೆ ಐದೈದು ಮೊಟ್ಟೆಗಳನ್ನು ಕೂರಿಸಿದ ನಂತರವೇ ಅವನಿಗೆ ಹೆಂಡತಿ ಸೂಪು ಬಡಿಸಿದಳು.

ಮೊದಲಿನಂತೆಯೇ, ಮರುದಿನ ಮಧ್ಯಾಹ್ನ ಅವನ ಸ್ನೇಹಿತರು ಲೂಡೊ ಆಡಲು ಬೋರ್ಡನ್ನು ಹೊತ್ತುಕೊಂಡು ಒಳಗೆ ಬಂದರು. ಟೊಂಯಾನ ಜೀವನೋಲ್ಲಾಸ ಉಸ್ಸಾಗಿದ್ದದ್ದು ಗೊತ್ತಾಗಲು ಅವರಿಗೆ ತಡವಾಗಲಿಲ್ಲ. ಅವನ ಕಣ್ಣುಗಳಲ್ಲಿ ಎಂದಿನ ತೇಜಸ್ಸು ಕಾಣಿಸುತ್ತಿರಲಿಲ್ಲ. ಮುಖದಲ್ಲಿ ಯಾವುದೋ ನೋವು ಬಾಧಿಸುತ್ತಿರುವಂತೆ ಕಾಣಿಸುತ್ತಿತ್ತು. ಇವತ್ತೇನಾಗಿದೆ ಇವನಿಗೆ ಎಂದು ಗೆಳೆಯರು ಆತಂಕಪಟ್ಟರು. ಅವನು ಒದ್ದಾಡುತ್ತಿರುವುದನ್ನು ನೋಡಲಾಗದೆ ಪ್ರೊಸ್ಪರ್ ಕೇಳಿಯೇ ಬಿಟ್ಟ: 'ನಿನ್ನ ಬಾಹುಗಳನ್ನೇನು ಮಂಚಕ್ಕೆ ಕಟ್ಟಿ ಹಾಕಿದ್ದಾಳೆಯೇ ಅತ್ತಿಗೆ?'

'ನನ್ನ ಬಾಹುಗಳು ಮಣಭಾರವಾಗಿರುವಂತೆ ಅನಿಸುತ್ತಿದೆ!' ಎಂದ ಟೊಂಯಾ ಮುಖ ಬಾಡಿಸುತ್ತಾ.

ಅಷ್ಟರಲ್ಲಿ ಇನ್ಯಾರೊ ಇಬ್ಬರು ಕುಡಿಯಲು ಬಂದವರು ಹರಟುತ್ತಾ ಕುಡಿಯಲು ಕುಳಿತರು. ಬಂದವರು ಊರಿನ ಮೇಯರ್ ಮತ್ತು ಅವನ ಸಹಾಯಕನಾಗಿದ್ದ. ಅವರ ಮಾತು ಒಳಗೆ ಸರಿಯಾಗಿ ಕೇಳುತ್ತಿರಲಿಲ್ಲವಾದ್ದರಿಂದ ಟೊಂಯಾ ಕೊಂಚ ಪಕ್ಕಕ್ಕೆ ವಾಲಿ ಗೋಡೆಗೆ ಕಿವಿಯಾನಿಸಿದ. ಅವನ ಈ ಕೆಟ್ಟ ಕುತೂಹಲದಿಂದಾಗಿ ಭುಜದ ಕೆಳಗೆ ಮರಿ ಮಾಡಲು ಇರಿಸಿದ್ದ ಐದೂ ಮೊಟ್ಟೆಗಳು ಅಪ್ಪಚ್ಚಿಯಾದವು! ಅವನ ಬಾಯಿಂದ ಅವಾಚ್ಯ ಬೈಗುಳವೊಂದು ಹೊರಟು ಅವನ ಹೆಂಡತಿ ಏದುಸಿರು ಬಿಡುತ್ತಾ ಒಳಗೆ ಬಂದಳು. ಅವಳಿಗೆ ಪರಿಸ್ಥಿತಿ ಅರ್ಥಮಾಡಿಕೊಳ್ಳಲು ತುಂಬಾ ಹೊತ್ತು ಹಿಡಿಯಲಿಲ್ಲ. ಅವನ ಭುಜಗಳಿಗೆ ಅಂಟಿದ್ದ ಆಮ್ಲೆಟನ್ನು ಕೆರೆದು ತೆಗೆಯಲು ಅವಳಿಗೆ ಬಹಳ ಹೊತ್ತೇ ಹಿಡಿಯಿತು! ಅವಳಿಗೆ ಸಿಟ್ಟು ಏರು ಏರುತ್ತಾ ಕುದಿಯುವ ಹಂತಕ್ಕೆ ಮುಟ್ಟಿತು. ಅವನ ಎದೆಯ ಮೇಲೆ ಏರಿ ಕುಳಿತು ಮುಖ ಮುಸುಡಿ ನೋಡದೆ ಬಾರಿಸತೊಡಗಿದಳು. ಇದನ್ನು ನೋಡುತ್ತಿದ್ದ ಗೆಳೆಯರು ಕಣ್ಣಲ್ಲಿ ನೀರು ಬರುವಷ್ಟು ಜೋರಾಗಿ ನಗೆಯಾಡಿದರು. ಅವನಿಗೆ ಏಟು ತಪ್ಪಿಸಿಕೊಳ್ಳುವುದು ಇರಲಿ, ಅವಳು ಮತ್ತೆ ಐದು ತತ್ತಿಗಳನ್ನು ತಂದು ಅವನ ಕಂಕುಳ ಕೆಳಗೆ ಇಟ್ಟಳು.

★★★

ಮೇಲಿನ ಘಟನೆಯ ನಂತರ ಟೊಂಯಾ ತುಂಬಾ ಸಪ್ಪಗಾದ. ಅವನ ಸ್ವಾಭಾವಿಕ ನಗು, ತಮಾಷೆ ಮಾತುಗಳು ನಿಂತು ಹೋದವು. ಹಾಸಿಗೆಯ ಮೇಲಿನ ನರಕದಲ್ಲಿಯೂ ಅವನು ಕಂಡುಕೊಳ್ಳುತ್ತಿದ್ದ ಚಿಕ್ಕ ಪುಟ್ಟ ಸಂತೋಷದ ಗಳಿಗೆಗಳನ್ನು ಅವನ ಹೆಂಡತಿ ಚಿವುಟಿ ಹಾಕಿದ್ದಳು. ಎರಡೂ ಕೈಗಳನ್ನು ಕಿಂಚಿತ್ತೂ ಅಲುಗಾಡಿಸದೆ, ಛಾವಣಿಯನ್ನೇ ನೋಡುತ್ತಾ ಅವನು ಮರಿ ಮಾಡುವ ಕಾಯಕದಲ್ಲಿ ವ್ಯಸ್ತನಾದ. ಹೀಗೇ ದಿನಗಳು ಕಳೆದಂತೆ ಟೊಂಯಾ, ಗೂಡಿನಲ್ಲಿ ಇದೇ ಕಾಯಕದಲ್ಲಿ ತೊಡಗಿದ್ದ ಹಳದಿ ಕೋಳಿಯ ಬಗ್ಗೆ ಯೋಚಿಸತೊಡಗಿದ. ತನಗೂ ಅದಕ್ಕೂ ಯಾವುದೋ ಅಮೂರ್ತ ಸಂಬಂಧವಿರುವಂತೆ ಅವನಿಗೆ ಅನಿಸತೊಡಗಿತು. ಗಳಿಗೆಗೊಮ್ಮೆ ಹೆಂಡತಿಯನ್ನು ಹಳದಿ ಕೋಳಿ ಏನು ಮಾಡುತ್ತಿದೆ ಎಂದು ತಲೆ ತಿನ್ನತೊಡಗಿದ.